ರಾಜ್ಯದಲ್ಲಿ ಆಶ್ರಯ ಮನೆಗಳಿಗೆ ಹಣ.

2033(2219)

ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಹಾಗೂ ನಗರ ಪ್ರದೇಶಗಳ ಆಶ್ರಯ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಹಣವನ್ನು ಏಕ ರೀತಿಯಲ್ಲಿ ಅನುಷ್ಠಾನಕ್ಕೆ ತರಲು ಸರ್ಕಾರ ಬದ್ಧವಾಗಿದೆಯೆ; ವಿವರ ನೀಡುವುದು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು):

ಅ. ಇಲ್ಲ.

ಶಿವಮೊಗ್ಗ ನಗರದ ಪರಿಮಿತಿಯಿಂದ ಬಗರ್ ಹುಕುಂ ಸಕ್ರಮೀಕರಣ.

2034(2238)

ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದ ಪರಿಮಿತಿಯಿಂದ ಬಗರ್ ಹುಕುಂ ಜಮೀನು ಸಕ್ರಮೀಕರಣಕ್ಕೆ ಇರುವ ಮಿತಿಯನ್ನು 2 ಕಿ.ಮೀ. ಇಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೆ? ವಿವರ ನೀಡುವುದು.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಇಲ್ಲ, ನಗರಗಳ ಬೆಳವಣಿಗೆ, ಕೈಗಾರಿಕೀಕರಣ, ವಾಸದ ನಿವೇಶನದ ಕೋರಿಕೆ ಇವುಗಳಿಗಾಗಿ ಜಮೀನಿನ ಅವಶ್ಯಕತೆ ಇದೆ. ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94(ಎ)ನಲ್ಲಿ ಉಪ ಕಲಂ 4ರಲ್ಲಿನ ಪರಂತುಕದ ಅನ್ವಯ ಶಿವಮೊಗ್ಗ ನಗರಪಾಲಿಕೆ ಮಿತಿಯಿಂದ 5 ಕಿ.ಮೀ. ಅಂತರದ ಜಮೀನಿನಲ್ಲಿನ ಅನಧಿಕೃತ ಸಾಗುವಳಿ ಸಕ್ರಮೀಕರಣವನ್ನು ನಿಷೇಧಿಸಿದೆ.

ಶಿವಮೊಗ್ಗ ಎ.ಪಿ.ಎಂ.ಸಿ. ಹಣವನ್ನು ಅಭಿವೃದ್ಧಿಗೆ ವಿನಿಯೋಗಿಸುವುದು.

2035(2239)

ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಎ.ಪಿ.ಎಂ.ಸಿ.ಗೆ ಕಳೆದ ಸಾಲಿನಲ್ಲಿ ಬಂದ ಸೆಸ್ ಎಷ್ಟು; ಇದರ ವ್ಯಾಪ್ತಿಗೆ ಬರುವ ಶಿವಮೊಗ್ಗ ಹಾಗೂ ತೀರ್ಥಹಳ್ಳಿ ತಾಲ್ಲೂಕುಗಳಿಗೆ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಿದ ಹಣ ಎಷ್ಟು?

ಆ) ಎ.ಪಿ.ಎಂ.ಸಿ. ಮತಿಯಿಂದ ಕೈಗೊಳ್ಳಲಾಗುವ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಉಪಯೋಗಿಸಲು ಸ್ಥಳೀಯ ಸಮಿತಿಗೆ ಹೆಚ್ಚಿನ ಅಧಿಕಾರ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ? ವಿವರ ನೀಡುವುದು.

ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು):

ಅ) 2000-01ನೇ ಸಾಲಿನಲ್ಲಿ ವಸೂಲಾದ ಮಾರುಕಟ್ಟೆ ಶುಲ್ಕ

ಅ)	ಶಿವಮೊಗ್ಗ ತಾಲ್ಲೂಕು	ರೂ. 5,28,59,035-53
ಬ)	ತೀರ್ಥಹಳ್ಳಿ ತಾಲ್ಲೂಕು	ರೂ. 12,24,800-00
	ಒಟ್ಟು	**ರೂ. 5,40,83,835-53**

2000-01ನೇ ಸಾಲಿನಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ವಿನಿಯೋಗಿಸಿದ ಹಣ

ಅ)	ಶಿವಮೊಗ್ಗ ತಾಲ್ಲೂಕು	ರೂ. 1,30,20,492-00
ಬ)	ತೀರ್ಥಹಳ್ಳಿ ತಾಲ್ಲೂಕು	ರೂ. 4,23,301-00
	ಒಟ್ಟು	**ರೂ. 1,34,43,793-00**

ಆ) ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಉಪಯೋಗಿಸಲು ಸಮಿತಿಗೆ ಈ ಕೆಳಕಂಡಂತೆ ಹೆಚ್ಚಿನ ಅಧಿಕಾರವನ್ನು ನೀಡಲಾಗಿದೆ. ಸಮಿತಿಯ ಮಟ್ಟದಲ್ಲಿ ವಾರ್ಷಿಕ ಕ್ರಿಯಾ ಯೋಜನೆ ಅನುಮೋದನೆಗೊಂಡ ಎಲ್ಲಾ ಕಾಮಗಾರಿಗಳನ್ನು ಕೈಗೊಂಡು ನಿರ್ವಹಿಸುವ ಅಧಿಕಾರ ಹೊಂದಿರುತ್ತದೆ. ರೂ.5.00 ಲಕ್ಷಗಳವರೆಗಿನ ಅಂದಾಜಿನ ಟೆಂಡರುಗಳು ಶೆಡ್ಯೂಲ್ 'ಬಿ' ಚಾಲ್ತಿ ದರಗಳ ಮೇಲೆ ಕೇ.5 ಹೆಚ್ಚಿನವರೆಗೆ ಮಾತ್ರ ಅನುಮೋದನೆಯನ್ನು ನೀಡಬಹುದು. ಕರ್ನಾಟಕ

ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ನಿಯಮಾವಳಿಗಳು 1968ರ ನಿಯಮ 71ರಲ್ಲಿ ತಲಾ ರೂ.20,000.00ದಂತೆ ವರ್ಷದಲ್ಲಿ ಗರಿಷ್ಟ ರೂ.1.00 ಲಕ್ಷದವರೆಗೆ ಮೌಲ್ಯದ ಕಾಮಗಾರಿಗಳನ್ನು ಅನುಮೋದಿಸುವ ಅಧಿಕಾರವನ್ನು ನೀಡಲಾಗಿದೆ.

ಕಂಬಳಿಹುಳು ಹಾಗೂ ನುಸಿಪೀಡೆ ಸುಧಾರಣೆ.

2036(2240)

ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದ ರೈತರ ತೋಟಗಳ ತೆಂಗಿನ ಮರಗಳಿಗೆ ತಗುಲಿರುವ ಕಂಬಳಿಹುಳು ಹಾವಳಿ ತಡೆ ಬಗ್ಗೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೆ? ವಿವರ ನೀಡುವುದು.

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು):

1) ಈ ಕೆಳಕಂಡ ಕ್ರಮಗಳನ್ನು ಸರ್ಕಾರವು ತೆಗೆದುಕೊಂಡಿದೆ:

1) ಪರೋಪಜೀವಿಗಳನ್ನು ಉತ್ಪಾದಿಸಿ ರೈತರಿಗೆ ವಿತರಿಸಲಾಗುತ್ತಿದೆ.

2) ಕಂಬಳಿಹುಳುಗಳ ಹಾವಳಿ ಇರುವ ಜಿಲ್ಲೆಗಳಲ್ಲಿ ಶೇಕಡಾ 50ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿಯನ್ನು ಸರಬರಾಜು ಮಾಡಲಾಗುತ್ತಾ ಇದೆ.

3) ಇಲಾಖೆಯ ಮತ್ತು ಕೃಷಿ ವಿಶ್ವವಿದ್ಯಾಲಯದ ತಜ್ಞರು ಹಾಗೂ ಅಧಿಕಾರಿಗಳು ರೈತರ ತೋಟಕ್ಕೆ ಭೇಟಿ ನೀಡಿ ತಾಂತ್ರಿಕ ಸಲಹೆ ನೀಡಿರುತ್ತಾರೆ.

ಪವರ್ ಟಿಲ್ಲರ್ ಟ್ರಾಕ್ಟರ್ ಹಾಗೂ ಪಂಪ್‌ಸೆಟ್ಟುಗಳ ಫಲಾನುಭವಿಗಳು.

2037(2241)

ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ರೈತರ ಉಪಯೋಗಕ್ಕೆ ಉಪಯೋಗವಾಗುವ ಪವರ್ ಟಿಲ್ಲರ್, ಟ್ರಾಕ್ಟರ್